ISSN: 2454-5813
Impact Factor: RJIF 3.6
Volume 5 Issue 3 2019
Months: Jul - Sep
Printed Journal
Indexed Journal
Refereed Journal
Peer Reviewed Journal

# International Journal of Kannada Research



Tirupati Journals Solutions
New Delhi, India

PRINCIPAL
J.P. College of Education
GADAG-582101

International Journal of Kannada Research

ISSN Number: 2454-5813

Volume 5 Issue 3 Jul - Sep 2019

Published By

Tirupati Journal Solutions

169, C-11, Sector-3, Rohini, Delhi-110085

Mob: +91-9711224068

INTERNATIONAL STANDARD SERIAL NUMBER

Scanned with OKEN Scanner

Year: 2019, Volume: 5, Issue: 3
ISSN Number: 2454-5813
Online Available at www.kannadajournal.com

# International Journal of Kannada Research

## Editorial Board

**Editor-In-Chief**



**Dr. (Mrs.) Neelambika Policepatil**
(Sherikar)
Principal and Research Guide
Godutai Doddappa Appa Degree College
for Women, S.B.Temple Road,
Brahampur, Kalaburagi,
Karnataka-585103, India.

**Associate Editor**




**Dr. Babu Bandeppa Pujari**
Professor (Head of Department) and
Research Guide
Dept. of Kannada, Sangameshwar Degree
College, Sholapur, Maharastra, India



**Dr. Math Eshwarayya Swami**
Associate Professor and Research Guide
Kannada Literature & Research Guide,
Smt.Veeramma Gangasiri Women's
Degree College, Gulbarga, Karnataka,
India



**Dr. Nagendra Masuti**
Associate Professor and Research Guide
Kannada Literature & Research Guide,
Smt. Veeramma Gangasiri Women's
Degree College, Gulbarga, Karnataka,
India



**Dr. Meenakshi Bali**
Associate Professor and Research Guide
HKES's M.S.I. Degree College of Arts,
Science & Commerce, Aiwan-E-Sahi,
Kalaburagi-585102, Karnataka, India



**Dr. Kavyashree G** (MA., M.Phil., Ph.D.)
Assistant Professor
Department Of Kannada, Government
First Grade College For Women,
Davangere, Karnataka, India



**Dr. Muniraju S.V**
(M. A, M. Ed., M. Phil, Ph. D)
Principal
JH Group of Institutions, Vijayanagar,
Bengaluru, Karnataka, India
Email: munirajuanupama@gmail.com
Phone: 9964852601

**Assistant Editor**



**Dr. R.B. Kokatanur**
(M.A., M.Phil, P.h.D.)
Assistant Professor
Dept. of History. Shri Shripadbod Swamiji
Govt. First Grade College, Mudalagi, TQ:
Gokak Dist.: Belagavi, Karnataka, India.



**Dr. Sanjeev R. Nayak**
(M.A., M.Phil, P.h.D.)
Assistant Editor
KLE'S G.H College Haveri,
Karnataka, India
Email: sanjeevrnayak@yahoo.com
Phone: 9448722992



Scanned with OKEN Scanner

Year: 2019, Volume: 5, Issue: 3
ISSN: 2454-5813
Impact Factor: Impact Factor: RJIF 3.6
Online Available at www.kannadajournal.com

# International Journal of Kannada Research

## Index for 2019 (Vol - 5, Issue - 3) Part - B

01. ದೈವ ಭಕ್ತಿ ಆಚರಣೆ ಮತ್ತು ('ಪಾರ್ಥನೆ') ಹರಕೆ (ಕರ್ನಾಟಕ ಪ್ರದೇಶದ ಹಬ್ಬ, ಜಾತ್ರೆಗಳನ್ನು ಅನುಲಕ್ಷಿಸಿ)
Authored by: ಡಾ.ಸಂಜೀವ ಆರ್.ನಾಯಕ
oage: 80-85

02. ಬಸವಣ್ಣನವರ ವಚನಗಳಲ್ಲಿ ಸಮಾನತೆ
Authored by: ಬಿ. ಬಿ. ಹೊಳಗುಂದಿ, ಡಾ. ಜಿ. ಆರ್. ಅಂಗಡಿ
Page: 86-89

03. ವಚನ ಹಾಗೂ ತತ್ವಪದ ಸಾಹಿತ್ಯದಲ್ಲಿ ಲೋಕ ಕಲ್ಯಾಣ
Authored by: ರಾಮರೆಡ್ಡಿ. ಕೆ.
Page: 90-92

04. 'ನಾಯಕ' ಹೆಸರಿಗೆ ಬೇಡರ ಸೂಕ್ತ
Authored by: ಮಂಜಪ್ಪ
Page: 93-95

05. ಡಾ. ಕಸ್ತೂರಿಯವರ ":ಗಾಳಿಗೋಪುರ" ಕಾದಂಬರಿಯಲ್ಲಿ ಹಾಸ್ಯ
Authored by: ಹೇಮಂತ್ ಕುಮಾರ್ ಎಸ್
Page: 96-99

06. ಬಾಗಲಕೋಟ ಜಿಲ್ಲೆಯ ಜಾನಪದ ವೃತ್ತಿಪರ ಗಾಯಕರು - ಗೊಂದಲಿಗರು
Authored by: ಡಾ. (ಶ್ರೀಮತಿ) ನಂದಾ ಎಮ್. ಪಾಟೀಲ
Page: 100-103

07. ಕನ್ನಡ ಭಾಷೆ ಮತ್ತು ಜನಪದ
Authored by: ಡಾ. ಎಸ್. ಬಿ. ರಾಠೋಡ
Page: 104-106

08. The bahamani kingdom, the political history of two major rulers
Authored by: Rathan N Salian
Page: 107-108

09. ಪುತ್ತೂರಿನ ಐತಿಹಾಸಿಕ ಸ್ಥಳಗಳು
Authored by: ವಿ. ಬಿ. ಅರ್ತಿಕಜೆ
Page: 109-111

10. ಪ್ರಾಥಮಿಕ ಶಾಲಾ ಶಿಕ್ಷಕರ ಪಾತ್ರ ಗ್ರಹಿಕೆಗಳು ವಿಚಾರಗಳು ಹಾಗೂ ತುಲನೆ
Authored by: ಡಾ. ಷಣ್ಮುಖ
Page: 112-115

International Journal of Kannada Research
www.kannadajournal.com

ISSN: 2454-5813
IJKR 2019; 5(3): 86-89
© 2019 IJKR
www.kannadajournal.com
Received: 03-05-2019
Accepted: 07-06-2019

ಬಿ.ಬಿ. ಹೊಳಗುಂದಿ
ಸಂಶೋಧನಾ ವಿದ್ಯಾರ್ಥಿ ಹಾಗೂ
ಸಹಾಯಕ ಪ್ರಾಧ್ಯಾಪಕರು
ಜಗದ್ಗುರು ಪಂಚಾಚಾರ್ಯ ಶಿಕ್ಷಣ
ಮಹಾವಿದ್ಯಾಲಯ, ಗದಗ.

ಡಾ. ಜಿ. ಆರ್. ಅಂಗಡಿ
ಸಂಶೋಧನಾ ಮಾರ್ಗದರ್ಶಕರು ಹಾಗೂ
ಸಹ ಪ್ರಾಧ್ಯಾಪಕರು ಸ್ಕೂಲ್ ಆಫ್
[illegible] ಗುಜರಾತ,
[illegible] ವಿಶ್ವವಿದ್ಯಾಲಯ,
[illegible], ಗುಜರಾತ.

# ಬಸವಣ್ಣನವರ ವಚನಗಳಲ್ಲಿ ಸಮಾನತೆ

ಬಿ.ಬಿ. ಹೊಳಗುಂದಿ, ಡಾ. ಜಿ. ಆರ್. ಅಂಗಡಿ

**ತಿರುಳು**

ಬಸವಣ್ಣನವರ ಕಾಲದಲ್ಲಿ ಕಂಡು ಬರುವ ಸಾಮಾಜಿಕ ಅಸಮಾನತೆ, ಅನಿಷ್ಟ ಜಾತಿ ಪದ್ಧತಿ, ಮೂಢನಂಬಿಕೆಗಳು, ಸ್ತ್ರೀಯರಿಗೆ ಸ್ವಾತಂತ್ರ್ಯ ಇಲ್ಲದಿರುವುದು, ರಾಜಕೀಯ ಅಸ್ಥಿರತೆ, ಆರ್ಥಿಕ ಅಸಮಾನತೆ ಹಾಗೂ ಧಾರ್ಮಿಕ ಕ್ಷೇತ್ರದಲ್ಲಿ ಕೆಳವರ್ಗದವರಿಗೆ ಹೆಚ್ಚಿನ ಅವಕಾಶವಿಲ್ಲದಿರುವುದನ್ನು ಕಂಡ ಬಸವಣ್ಣನವರು ಹೊಸ ಸಮಾಜವನ್ನು ನಿರ್ಮಿಸುವುದರ ಮೂಲಕ ಸಮಾನತೆಯನ್ನು ತರಲು ಪ್ರಯತ್ನಿಸಿದರು. ಸಮಾಜದ ಪ್ರತಿ ಹಂತದಲ್ಲಿ ತನ್ನದೇ ಆದ ವಿಚಾರಗಳ ಮೂಲಕ ಕ್ರಾಂತಿ ಮಾಡಿ ನವ ಸಮಾಜದ ಅಡಿಪಾಯ ಹಾಕಿದರು. ಜಿಡ್ಡುಗಟ್ಟಿದ ಗೊಡ್ಡು ಸಂಪ್ರದಾಯವನ್ನು ತಮ್ಮ ವಚನಗಳ ಮೂಲಕ ವೈಚಾರಿಕ ವಿಚಾರಗಳಿಂದ ಸಮಾಜಕ್ಕೆ ಹೊಸ ಬೆಳಕನ್ನು ಕೊಟ್ಟು ಸಮಾಜವನ್ನು ಶುದ್ಧೀಕರಿಸಿ ಹೊಸ ಸಮಾಜವನ್ನು ಕಟ್ಟಿ ಇಡೀ ಮಾನವ ಕುಲಕ್ಕೆ ಆದರ್ಶ ಪ್ರಾಯರಾಗಿದ್ದಾರೆ. ಇವರ ಮೂಲ ಉದ್ದೇಶ ತಾವು ಬದುಕಬೇಕು ಸಮಾಜ ಉಳಿಯಬೇಕು. ತಮ್ಮ ಸಾಮಾಜಿಕ ಬದುಕು ಕಟ್ಟಿಕೊಳ್ಳಲು ಬೇಕಾದಂತಹ ಪರಿಸರವನ್ನು ಅವರು ಸಮಾಜಕ್ಕೆ ಒದಗಿಸಿದರು. ಅಂತಹ ಹಲವಾರು ದೃಷ್ಟಿಕೋನಗಳನ್ನು ಇವರ ವಚನಗಳಲ್ಲಿ ಕಾಣಬಹುದು.

**ಪ್ರಮುಖ ಪದಗಳು:** ಬಸವಣ್ಣನವರ ವಚನಗಳು, ಸಾಮಾಜಿಕ, ಆರ್ಥಿಕ, ಧಾರ್ಮಿಕ, ನೈತಿಕ, ರಾಜಕೀಯ, ಪ್ರಗತಿಪರ, ನಡೆ-ನುಡಿ, ಮೇಲು-ಕೀಳು, ದಯೆ, ಮಾನವೀಯತೆ, ಮೂಢನಂಬಿಕೆ, ಶೋಷಣೆ, ಕಾಯಕ, ದಾಸೋಹ.

## ಪ್ರಸ್ತಾವನೆ

ಹನ್ನೆರಡನೆಯ ಶತಮಾನದ ಅಣ್ಣ ಬಸವಣ್ಣ ತಮ್ಮ ಕಾಲವನ್ನು ಮೀರಿ ಇಪ್ಪತ್ತೊಂದನೆಯ ಶತಮ್ಮಾನದ ವಿಚಾರಗಳನ್ನು ಹೊಂದಿದ್ದು ಆತನ ದೂರದೃಷ್ಟಿಗೆ ಸಾಕ್ಷಿಯಾಗಿದೆ. ದಾರ್ಶನಿಕನಾದ ಬಸವಣ್ಣನವರ ವಿಚಾರಗಳು ಕರ್ನಾಟಕದಲ್ಲಷ್ಟೇ ಅಲ್ಲ ಇಡೀ ಜಾಗತಿಕ ಮಟ್ಟದಲ್ಲಿ ಮನ್ನಣೆ ಹೊಂದಿ ಲಿಂಗಾಯತ ಧರ್ಮವು ವಿಶ್ವ ಧರ್ಮವೆನಿಸಿದೆ. ನೈಸರ್ಗಿಕವಾಗಿ ಏನೇ ಇದ್ದರೂ ಬದುಕಿನ ವಿವಿಧ ಸ್ತರಗಳಲ್ಲಿ ಪ್ರತಿಯೊಬ್ಬರು ಸಮಾನರು ಎಂಬ ವಿಚಾರವನ್ನು ಜಗತ್ತಿಗೆ ಬಿತ್ತಿದ ಬಸವಣ್ಣನವರು ಆ ಕಾಲದಲ್ಲಿ ಎದ್ದು ಕಾಣುವ ಮಹಾನ್ ವ್ಯಕ್ತಿತ್ವವಾಗಿದೆ. ಸಮಾಜೋ-ಧಾರ್ಮಿಕ ಚಳುವಳಿಯನ್ನು ಹುಟ್ಟು ಹಾಕುವುದಕ್ಕಿಂತ ಪೂರ್ವದಲ್ಲಿ ಇಲ್ಲಿ ಸಾಮಾಜಿಕ, ಧಾರ್ಮಿಕ, ಆರ್ಥಿಕ ಇನ್ನೂ ಹಲವು ಕ್ಷೇತ್ರಗಳಲ್ಲಿ ಅಸಮಾನತೆ ತುಂಬಿತ್ತು. ಜಾತಿ ಪದ್ಧತಿ ಕೆಳವರ್ಗದವರಲ್ಲಿ ಉಸಿರುಗಟ್ಟಿಸುವಂತಿತ್ತು. ಮುಂದೆ ಇದೇ ಜಾತಿ ವರ್ಗವಾಗಿ ಪರಿಣಮಿಸಿ ಮೇಲು-ಕೀಳು ಎಂಬ ಭಾವನೆ ಮೂಡಿಸಿತು. ಇಂತಹ ಹೀನಾಯ ಸ್ಥಿತಿಯಲ್ಲಿದ್ದ ಕೆಳವರ್ಗದವರ ಧಾರ್ಮಿಕ ಬದುಕು ತುಂಬಾ ದುಸ್ಥಿತಿಯಲ್ಲಿತ್ತು. ಅಜ್ಞಾನ ಮೂಢನಂಬಿಕೆ ಮತ್ತು ಅನಿಷ್ಟ ಆಚರಣೆಗಳ ಮೂಲಕ ಜನಸಾಮಾನ್ಯರ ಬದುಕು ನೆಲಕಚ್ಚಿ ಹೋಗಿತ್ತು. ನಾಡಿನಲ್ಲಿ ಇಂತಹ ವರ್ಗಕ್ಕೆ ಬಸವಣ್ಣ ದೈವೀಪುರುಷರಾಗಿ ಜಗವೆಲ್ಲ ನಿದ್ರಿಸುವಾಗ ಎಚ್ಚೆತ್ತು ಸಮಾನತೆಯ ಆಶಾ ದೀವಿಗೆಯನ್ನು ಹಿಡಿದು ಸಮಾನತೆಯ ಕಹಳೆಯನ್ನುದಿದರು.

## ಸಾಮಾಜಿಕ ಸಮಾನತೆ

ಸಕಲ ಜೀವಿಗೂ ಲೇಸ ಬಯಸುವ ಬಸವಣ್ಣನವರು ಮಾನವರಲ್ಲಿ ಸಮಾನತೆ ಕಾಣುವದರಲ್ಲಿ ಅಚ್ಚರಿಯೆನಿಲ್ಲ. ಇವರು ಸಮಾನತೆಯ ಮೇಲೆ ನವ ಸಮಾಜ ಕಟ್ಟಿದರು. ಜಿಡ್ಡುಗಟ್ಟಿದ ಆ ಕಾಲದಲ್ಲಿ

Correspondence
ಬಿ.ಬಿ. ಹೊಳಗುಂದಿ
ಸಂಶೋಧನಾ ವಿದ್ಯಾರ್ಥಿ ಹಾಗೂ
ಸಹಾಯಕ ಪ್ರಾಧ್ಯಾಪಕರು
ಜಗದ್ಗುರು ಪಂಚಾಚಾರ್ಯ ಶಿಕ್ಷಣ
ಮಹಾವಿದ್ಯಾಲಯ, ಗದಗ.

ಮಾನವೀಯತೆಯನ್ನು ಇಲ್ಲಿ ಕಾಣಬಹುದು. ಆತನ ನಡೆ-ನುಡಿ ಕೂಡ ಒಂದೇ ಆಗಿದ್ದವು.

"ದೇವ, ದೇವಾ ಭಿನ್ನಪವನವಧಾರು;
ವಿಪ್ರ ಮೊದಲು ಅಂತ್ಯಜ ಕಡೆಯಾಗಿ
ಶಿವಭಕ್ತರಾದವರನೆಲ್ಲರನೊಂದೇ ಎಂಬೆ;
ಹಾರುವ ಮೊದಲು ಶ್ವಪಚ ಕಡೆಯಾಗಿ
ಭವಿಯಾದವರನೊಂದೇ ಎಂಬೆ;
ಈ ಹೀಗೆಂದು ನಂಬುವುದೆನ್ನ ಮನವು;
ಈ ನುಡಿದ ನುಡಿಯೊಳಗೆ ಎಳ್ಳ ಮೊನೆಯಷ್ಟು ಸಂದೇಹವುಳ್ಳರೆ,
ಹಲುದೋರಿ ಮೂಗ ಕೊಯಿ, ಕೂಡಲ ಸಂಗಮದೇವಾ."

ಅಂಗದ ಮೇಲೆ ಲಿಂಗವಿದ್ದಾತನೆಲ್ಲರನು ಸಂಗಮನಾಥನೆಂದೇ ಬಸವಣ್ಣನು ಭಾವಿಸಿದ ಲಿಂಗಸಂಸ್ಕಾರವಾದ ಬಳಿಕ ವಿಪ್ರ ವಿಪ್ರನಾಗಿ ಉಳಿಯಲಿಲ್ಲ. ಅದೇ ರೀತಿ ಅಂತ್ಯಜರು ಅಂತ್ಯಜರಾಗಿ ಉಳಿಯಲಿಲ್ಲ. ಅವರೆಲ್ಲ ಭಕ್ತರಾದರು, ಸಮಾನರಾದರು, ಒಡೆದ ಸಮಾಜವನ್ನು ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನು ಲಿಂಗ ಸಂಸ್ಕಾರದ ಮೂಲಕ ಒಗ್ಗೂಡಿಸಿದನು. ಬಸವಣ್ಣನ ದೃಷ್ಟಿಯಲ್ಲಿ ಕೊಲುವವನೇ ಮಾದಿಗ, ಹೊಲಸು ತಿನ್ನುವವನೆ ಹೊಲೆಯ ಎಂಬ ಮಾತುಗಳನ್ನು ಹೇಳುವುದರ ಮೂಲಕ ಜಾತಿ ಪದ್ಧತಿಯ ನಿರ್ಮೂಲನೆಗಾಗಿ ಜೀವನದುದ್ದಕ್ಕೂ ಶ್ರಮಿಸಿದರು.

### ಸ್ತ್ರೀ ಸಮಾನತೆ

ಹನ್ನೆರಡನೆಯ ಶತಮಾನದ ಸ್ತ್ರೀಯರಿಗೆ ಪುರುಷನಂತಯೇ ಸಮಾನವಾದ ಹಕ್ಕುಗಳು ಗೌರವವು ಉಂಟೆಂದು ಬಸವಣ್ಣನವರು ಭಾವಿಸಿದರು. ಆಗಿನ ಕಾಲದಲ್ಲಿ ಅಕ್ಕ ಮಹಾದೇವಿಯೂ ಕೂಡಾ ಒಳ್ಳೆಯ ಜ್ಞಾನಿಯಾಗಿದ್ದಳು. ಇವಳಂತೆಯೆ ನೀಲಾಂಬಿಕೆ, ಗಂಗಾಂಬಿಕೆ, ಆಯ್ದಕ್ಕಿ ಲಕ್ಕಮ್ಮ, ಮುಕ್ತಾಯಕ್ಕ ಹಲವಾರು ಶಿವಶರಣೆಯರಿದ್ದರು ಇವರೆಲ್ಲರೂ ಶಿವಾನುಭವ ಮಂಟಪದ ಚರ್ಚೆಗಳಲ್ಲಿ ಭಾಗಿಗಳಾಗುತ್ತಿದ್ದರಲ್ಲದೇ ಮನೆಗಳಲ್ಲಿ ತಮ್ಮ ಪತಿಗಳಿಗೆ ಹಲವಾರು ಸಂದರ್ಭಗಳಲ್ಲಿ ಉಪದೇಶ ಮಾಡುತ್ತಿದ್ದರು. ಆ ಶಿವಶರಣೆಯರ ಜ್ಞಾನ ಸಂಸ್ಕೃತಿ ಸೌಜನ್ಯಗಳನ್ನು ನೋಡಿದಾಗ ಇವರೆಲ್ಲರಿಗೂ ಅನುಭವ ಮಂಟಪದಲ್ಲಿ ಸಮಾನ ಅವಕಾಶಗಳನ್ನು ಕೊಡಲಾಗಿತ್ತು.

"ಎಲ್ಲಿ ನೋಡಿದಲ್ಲಿ ಮನವೆಳಸಿದರೆ
ಆಣೆ, ನಿಮ್ಮಾಣೆ ನಿಮ್ಮ ಪ್ರಥಮರಾಣೆ !
ಪರವಧುವನು ಮಹಾದೇವಿಯೆಂಬೆ,
ಕೂಡಲ ಸಂಗಮದೇವಾ."

ಹೀಗೆ ಹಲವಾರು ಶಿವಶರಣೆಯರು ಮಹಾಜ್ಞಾನಿಗಳಾಗಿ ಧರ್ಮ ಸಾರವನ್ನು ಲೋಕಕ್ಕೆ ಕೊಟ್ಟಿರುತ್ತಾರೆ. ಸ್ತ್ರೀಯರಿಗೂ ದೀಕ್ಷೆ ಮತ್ತು ಪಟ್ಟದ ಸಾಧನ ಮಾರ್ಗಗಳು ಉಂಟೆಂದು ಸಮಾನವಾದ ಅವಕಾಶವನ್ನು ಕೊಟ್ಟುದರ ಫಲವನ್ನು ಇಲ್ಲಿ ಕಾಣಬಹುದು. ಹೆಂಗಸರು ಮಾಯೆಯೆಂದಾಗಲಿ ಅವರು ಕೀಳೆಂದಾಗಲಿ ಕೇವಲ ಗೃಹಕೃತ್ಯ ನಿರ್ವಹಣದ ಕೋಶ್ಯೆಂದಾಗಲಿ ಪುರುಷನ ಭೋಗ ಸಾಮಗ್ರಿಯೆಂದಾಗಲಿ ಭಾವಿಸದೆ ಅವರು ಜ್ಞಾನವನ್ನು ಉಪದೇಶಿಸಬಲ್ಲ ಮಹಾನುಭಾವಿಗಳೆಂದು ವಚನಧರ್ಮ ಗೌರವಿಸುತ್ತದೆ. ಈ ರೀತಿ ಬಸವಣ್ಣನು ಇವರನ್ನು ಸಮಾನತೆಯಿಂದ ಕಂಡು ಅವರಿಗೆ ಪುರುಷ ಸಮಾನ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ.

[illegible] ಹೆಸರಿನಲ್ಲಿ ಯಜ್ಞಯಾಗಗಳನ್ನು ಮತ್ತು ಪ್ರಕಂಪಿಸಿದ ಧರ್ಮ ಅದು ನಿಜವಾದ ಧರ್ಮವಲ್ಲ ಹಾಗೆಯೇ ಆಹಾರಕ್ಕಾಗಿ ಪ್ರಾಣಿಗಳನ್ನು ಹಿಂಸಿಸುವ ಧರ್ಮಗಳು ಬಸವಣ್ಣನ ಪ್ರಕಾರ ಧರ್ಮವಲ್ಲ. ಸಕಲ ಜೀವಿಗಳಿಗೂ ಲೇಸ ಬಯಸುವ ಬಸವಣ್ಣನವರು ಮಾನವರ ಹಿತಕ್ಕಾಗಿ ಅನ್ಯ ಪ್ರಾಣಿಗಳನ್ನು ಹಿಂಸಿಸುವ ವಿಚಾರ ಕೂಡಾ ಬಸವಣ್ಣನಿಗಿಲ್ಲ.

"ದಯವಿಲ್ಲದ ಧರ್ಮವದೇವುದಯ್ಯಾ ?
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ;
ದಯವೇ ಧರ್ಮದ ಮೂಲವಯ್ಯಾ;
ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯಾ."

'ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ' – ಎನ್ನುವಲ್ಲಿ ಮಾನವೀಯತೆಯಿದೆ. ಬಸವಣ್ಣನವರದು ಮಾನವ ಧರ್ಮ, ಮಾನವರಿಗಾಗಿ ಧರ್ಮ. ಬಸವಣ್ಣನವರದು ದೇವರಿಗಾಗಿ ಧರ್ಮವಲ್ಲ ದೇವ ಸಂತೃಪ್ತಿಗಾಗಿ. ಹೀಗೆ ಬಸವಣ್ಣನು ಇಡೀ ಭರತ ಖಂಡದ ಇತಿಹಾಸದಲ್ಲಿ ಇಂತಹ ಮಾನವೀಯ ಧರ್ಮವನ್ನು ಮೆರೆದವರಲ್ಲಿ ಪ್ರಥಮರಾಗಿದ್ದಾರೆ.
ಹರಿಜನರಿಗೆ ಮತ್ತು ಹೆಣ್ಣು ಮಕ್ಕಳಿಗೆ ಗುಡಿಯಲ್ಲಿ ಪ್ರವೇಶವಿರಲಿಲ್ಲ ಇದನ್ನು ಅರಿತ ಬಸವಣ್ಣನವರು ಗುಡಿಯಲ್ಲಿಯ ಸ್ಥಾವರ ಲಿಂಗವನ್ನು ಇಷ್ಟಲಿಂಗವನ್ನಾಗಿ ಮಾರ್ಪಡಿಸಿ ಭಕ್ತರ ಎದೆಗೆ ಕಟ್ಟಿದ. ಹರಿಜನರು ಈಗ ಗುಡಿಗೆ ಹೋಗಬೇಕಾಗಿಲ್ಲ ಗುಡಿಯಲ್ಲಿದ್ದ ಲಿಂಗವೇ ಈಗ ಎದ್ದು ಬಂದು ಭಕ್ತನ ಕೊರಳಿಗೆ ಗಂಟು ಬಿದ್ದಿರುವ ರೀತಿ ಜಗವರಿಯದ ಮಹಾತ್ಕಾರ್ಯವನ್ನು ಮಾಡಿದ.ವಿಪ್ರನಿಂದ ಹಿಡಿದು ಅಂತ್ಯಜನವರೆಗೆ ಭಕ್ತರಾದವರನ್ನೆಲ್ಲಾ ಬಸವಣ್ಣನು ಸಮಾನ ದೃಷ್ಟಿಯಿಂದ ಕಂಡ. ಹರಿಜನರಿಗೂ ಹೆಣ್ಣು ಮಕ್ಕಳಿಗೂ ಸಮಾನ ಧಾರ್ಮಿಕ ಹಕ್ಕುಗಳು ದೊರೆತದ್ದು ಭಾರತದ ಇತಿಹಾಸದಲ್ಲಿಯೇ ಪ್ರಥಮವಾಗಿದೆ. ಯಜ್ಞ ಯಾಗ ಪ್ರಾಣಿಬಲಿ ತಡೆದು ಹೋಮ ಹವನದ ಹೆಸರಿನಲ್ಲಿ ದವಸ ಧಾನ್ಯದ ನಾಶ ನಿಲ್ಲಿಸಿದ ಇದು ಭಾರತದ ಹೊಸ ಇತಿಹಾಸ. ಮೂಢನಂಬಿಕೆ ದೇವದಾಸಿ ಹಲವು ದೈವಗಳ ಮೂಢ ಶೋಷಣರಹಿತ ಸಮಾಜ ಕಟ್ಟಿದ ಸಮಾಜ ಸುಧಾರಕ ಬಸವಣ್ಣನವರು.

### ನೈತಿಕ ಸಮಾನತೆ

ಜೀವನದ ನಡತೆಯೇ [illegible] ಎಲ್ಲ ಭಕ್ತರಿಗೂ ಒಂದೇ ನಡತೆ ಒಂದೇ ನೀತಿಯನ್ನು ಬಸವಣ್ಣ ಹಾಕಿಕೊಟ್ಟ ಇದರಲ್ಲಿ ಯಾರಿಗೂ ತಾರತಮ್ಯ ಮಾಡದೇ ವರ್ಗರಹಿತ ಜಾತಿರಹಿತ ಬಸವಣ್ಣನ ಸಮಾಜದಲ್ಲಿ ಎಲ್ಲರಿಗೂ ಒಂದೇ ನೀತಿ. 'ಇಲ್ಲಿ ಸಲ್ಲುವವರು – ಅಲ್ಲಿಯೂ ಸಲ್ಲುವರು.' ಇದು ಎಲ್ಲರಿಗೂ ಅನ್ವಯಿಸುವದು. ಹುಟ್ಟಿನಿಂದ ಹಿಡಿದು ಸಾವಿನವರೆಗೆ ಎಲ್ಲರಿಗೂ ಒಂದೇ ನೀತಿ ಒಂದೇ ಪದ್ಧತಿ ಒಂದೇ [illegible] ಅಧಿಕಾರ ಶ್ರೀಮಂತಿಕೆ ಹಾಗೂ ಅಂಗಭೇದದ ತಾರತಮ್ಯ ಇಲ್ಲ. ಇಂತಹ ನೈತಿಕ ಸಮಾನತೆಯನ್ನು ಭಾರತದಲ್ಲಿ ಹಿಂದೆಂದು ಕಣ್ಣ ಇತಿಹಾಸದಲ್ಲಿ ಕಂಡಿಲ್ಲ ಇದು ಜಗತ್ತಿನ ಇತಿಹಾಸದಲ್ಲಿಯೇ ಒಂದು ಮೈಲಿಗಲ್ಲು.
"ಕಳಬೇಡ, ಕೊಲಬೇಡ; ಹುಸಿಯ ನುಡಿಯಲು ಬೇಡ;

ಮುನಿಯ ಬೇಡ, ಅನ್ಯರಿಗೆ ಅಸಹ್ಯ ಪಡಬೇಡ;
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ.

ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲ ಸಂಗಮದೇವರನೊಲಿಸುವ ಪರಿ."

ಸತ್ಯವ ನುಡಿವುದೇ ದೇವಲೋಕ ಭೂಲೋಕವನ್ನು ದೇವಲೋಕ ಮಾಡುವ ಹುಮ್ಮಸ್ಸು ಆಚಾರವೇ ಸ್ವರ್ಗ ಅನಾಚಾರವೇ ನರಕ ಇದರ ಮೂಲಕ ಸಮಾಜವನ್ನು ಸುಧಾರಿಸಿ ಅಲ್ಲಿ ಸಮಾನತೆಯನ್ನು ತಂದರು.

**ಆರ್ಥಿಕ ಸಮಾನತೆ**

ಬಸವಣ್ಣನವರು ಆರ್ಥಿಕ ಸಮಾನತೆಯ ಮಹತ್ವ ಅರಿತು ಶೋಷಣಾರಹಿತ ಸಮಾಜ ನಿರ್ಮಾಣದ ಗುರಿ ಹೊಂದಿ ಪ್ರತಿಯೊಬ್ಬನು ದುಡಿಯಬೇಕು ತನ್ನ ಅನ್ನವನ್ನು ತಾನೇ ಗಳಿಸಬೇಕು ಮತ್ತೊಬ್ಬನ ಶ್ರಮದ ಮೇಲೆ ಬದುಕಬಾರದು ಎಂಬುದು ಇವರ ಆರ್ಥಿಕ ಮೂಲ ವಿಚಾರಗಳು. ಪ್ರತಿಯೊಬ್ಬನು ತನಗೆ ತಕ್ಕ ಹಾಗೂ ಇಷ್ಟವಾದ ಕಾಯಕವನ್ನು ಮಾಡಬೇಕು ಸಮಾಜದಲ್ಲಿ ಶ್ರೇಷ್ಠ – ಕನಿಷ್ಠ ಯಾರೇ ಇರಲಿ ಅವರು ಕಾಯಕ ಮಾಡಲೇಬೇಕು. ಕಾಯಕ ಮಾಡದವರಿಗೆ ಊಟವಿಲ್ಲ ಎಲ್ಲರೂ ಕಾಯಕದಲ್ಲಿ ಕೈಲಾಸ ಕಾಣಬೇಕು, ಪ್ರಗತಿ ಹೊಂದಬೇಕು, ಆನಂದ ಪಡಬೇಕು.
ಶರಣರಿಗೆ ಕಾಯಕವನ್ನೆ ಪೂಜೆಯನ್ನಾಗಿ ಮಾಡಿಕೊಂಡು ಕೈಲಾಸ ಕಾಣುವ ದಾರಿ ತೋರಿಸಿದಾತ ಬಸವಣ್ಣ. ಇದರಲ್ಲಿ ಪ್ರತಿಯೊಬ್ಬನ ಉದ್ಧಾರವಿದೆ ಸಮಾಜದ ಉದ್ಧಾರವಿದೆ ಲಿಂಗ ಪೂಜೆಗಿಂತ ಕಾಯಕ ಶ್ರೇಷ್ಠ! ಕಾಯಕದಲ್ಲಿ ನಿರತನಾದರೆ ಲಿಂಗ ಪೂಜೆಯನ್ನಾದರು ಮರೆಯಬೇಕೆಂಬುವುದು ಇವರ ವಾದವಾಗಿದೆ. ಶ್ರಮಕ್ಕೆ ಕಾಯಕಕ್ಕೆ ಪ್ರಾಶಸ್ತ್ಯ, ಗೌರವ ಹಾಗೂ ಮನ್ನಣೆಯಿತ್ತವರಲ್ಲಿ ಬಸವಣ್ಣನೇ ಮೊದಲಿಗನಾಗಿದ್ದಾನೆ. ಅನ್ಯರ ಮನೆಗೆ ಹೋಗಿ ತನ್ನುದರವ ಹೊರೆಯದ ಅಚ್ಚ ಶರಣರ ಕಂಡರೆ ನಿಶ್ಚಯವಾಗಿ ಕೂಡಲಸಂಗಮನೆಂಬೆ. ಕಾಯಕದಲ್ಲಿ ಬಸವಣ್ಣನವರು ಎಂದು ತಾರತಮ್ಯ ಮಾಡಲಿಲ್ಲ ಮೇಲು ಕೀಳೆಂದು ಅಳೆಯಲಿಲ್ಲ ಹೀಯಾಳಿಸಲಿಲ್ಲ ಪ್ರತಿಯೊಂದು ಕಾಯಕಕ್ಕೆ ಮನ್ನಣೆ ಇಟ್ಟು ಗೌರವಿಸಿ ಸಮಾನವಾಗಿ ಕಂಡರು.

"ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ;
ಹಾಸನಿಕ್ಕಿ ಸಾಲಿಗನಾದ; ವೇದವನೋದಿ ಹಾರವನಾದ!
ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ ?
ಇದು ಕಾರಣ, ಕೂಡಲಸಂಗಮ ದೇವಾ,
ಲಿಂಗಸ್ಥಲವನರಿದವನೆ ಕುಲಜನು."

ಬಸವಣ್ಣನ ಇಂಥ ಹಲವಾರು ಆರ್ಥಿಕ ವಿಚಾರಗಳು ಅದರಲ್ಲಿಯೂ ಮುಖ್ಯವಾಗಿ ಕಾಯಕ ಶ್ರಮ ಗೌರವ ಹಾಗೂ ಸಮಾಜವಾದಗಳು ಸಮಾನತೆಗೆ ಹೆಚ್ಚು ಉಪಯುಕ್ತವಾಗಿವೆ.

**ರಾಜಕೀಯ ಸಮಾನತೆ**

ಬಸವಣ್ಣನ ರಾಜಕೀಯ ವಿಚಾರಗಳು ಸಮಾನತೆಯನ್ನಾಧರಿಸಿವೆ. ಸಮಾನತೆಯು ಪ್ರಜಾಪ್ರಭುತ್ವದ ಅಡಿಗಲ್ಲು ಹನ್ನೆರಡನೆಯ ಶತಮಾನದಲ್ಲಿ ನಮ್ಮ ದೇಶದಲ್ಲಿ ಕೂಡ ಸಮಾನತೆ ಇರಲಿಲ್ಲ ಬಸವಣ್ಣನವರು ಸರ್ವರಿಗೂ ಸಮಾನರಾಗಿ ವಿಚಾರ ಸ್ವಾತಂತ್ರ್ಯ ನೀಡಿದರು. ಇಂತಹ ರಾಜಕೀಯ ಸಮಾನತೆಯನ್ನು ಬಸವಣ್ಣನ ಸಂಸತ್ತಾದ ಅನುಭವ ಮಂಟಪದಲ್ಲಿ ಕಾಣಬಹುದು. ಜಾತಿ–ಲಿಂಗ ಬೇಧವಿಲ್ಲದೆ ಸಮಾನತೆ ಎಲ್ಲಾ ಶರಣರಲ್ಲಿತ್ತು. ಜನ್ಮದಿಂದ ದಲಿತನಾದರು ಶರಣ ಅಲ್ಲಮಪ್ರಭುದೇವರು ಅನುಭವ ಮಂಟಪದ ಶೂನ್ಯ ಸಿಂಹಾಸನಾಧೀಶ್ವರರಾಗಿದ್ದರು ಸ್ವಾತಂತ್ರ್ಯ ಸಿಕ್ಕು ಹಲವು ದಶಕಗಳೇ ಕಳೆದರು ಈ ರೀತಿಯ ಸಮಾನತೆ ದೊರೆಯಲಿಲ್ಲ ಇದು ಬಸವಣ್ಣನು ಹನ್ನೆರಡನೆಯ ಶತಮಾನದಲ್ಲಿ ನೀಡಿದ ಕೊಡುಗೆಯಾಗಿದೆ.

"ಇವನಾರವ, ಇವನಾರವ, ಇವನಾರವ ? ನೆಂದೆನಿಸದಿರಯ್ಯಾ.
ಇವ ನಮ್ಮವ, ಇವ ನಮ್ಮವ ಇವ ನಮ್ಮವ ನೆಂದೆನಿಸಯ್ಯಾ.
ಕೂಡಲ ಸಂಗಮದೇವಾ, ನಿಮ್ಮ ಮನೆಯ ಮಗನೆನಿಸಯ್ಯಾ"

ಒಟ್ಟಾರೆಯಾಗಿ ಶಿಕ್ಷಣ ಕ್ಷೇತ್ರದಲ್ಲಿ ಸಮಾನತೆ ಎಂಬುದು ಪ್ರತಿ ಹಂತದಲ್ಲೂ ನಡೆಯುತ್ತಿದೆ, ಅಂದರೆ ಶಾಲೆಗಳಲ್ಲಿ ಸಹಭೋಜನ, ಸಮವಸ್ತ್ರ, ಸಹಶಿಕ್ಷಣ, ಪ್ರತಿ ವಿದ್ಯಾರ್ಥಿಯು ಒಳ್ಳೆಯದನ್ನೆ ಬಯಸುವ ಮನೋಭಾವನೆ, ಸಹಾಯ ಮಾಡುವ ಮಾನವೀಯ ಮೌಲ್ಯಗಳ ಅಳವಡಿಕೆ, ಹಣದ ಮಹತ್ವ, ಶಾಲಾ ಸಂಸತ್ ಮೂಲಕ ಸರ್ವರಿಗೂ ಸಮಾನ ಅವಕಾಶಗಳನ್ನು ಇಂದಿನ ಶಾಲಾ ಶಿಕ್ಷಣದಲ್ಲಿ ಅಳವಡಿಕೊಳ್ಳಲಾಗಿದೆ. ಇಂತಹ ಅಭೂತಪೂರ್ವವಾದ ಅಂಶಗಳನ್ನು ಬಸವಣ್ಣನವರ ವಚನಗಳಲ್ಲಿ ಕಾಣಬಹುದಾಗಿದೆ.

**ಶೈಕ್ಷಣಿಕ ನಿಹಿತಾರ್ಥಗಳು**

ಪ್ರಚಲಿತ ಶಿಕ್ಷಣದಲ್ಲಿ ಸಹ ಬೋಜನ ಸಮವಸ್ತ್ರ ಮುಂತಾದವುಗಳನ್ನು ನೀಡುವ ಮೂಲಕ ಸರ್ವ ಮಕ್ಕಳ ಸಾಮಾಜಿಕ ಸಮಾನತೆ ತರಲಾಗಿದೆ.
ಸಂವಿಧಾನದಲ್ಲಿಯ ಕಾನೂನುಗಳ ಮೂಲಕ ಸ್ತ್ರೀಯರಿಗೂ ಮೀಸಲಾತಿ ನೀಡುವುದರ ಮೂಲಕ ಶಿಕ್ಷಣದ ಜೊತೆಗೆ ಸ್ತ್ರೀಸಮಾನತೆ ತರಲಾಗಿದೆ.
ಸಕಲ ಜೀವಿಗಳಿಗೆ ಲೇಸ ಬಯಸುವ ಮೂಲಕ ಪ್ರತಿಯೊಬ್ಬರನ್ನು ಮೇಲಸ್ತರಕ್ಕೆ ತರುವುದರ ಮೂಲಕ ಧಾರ್ಮಿಕ ಸಮಾನತೆಗೆ ಪ್ರೇರೆಪಿಸಲಾಗಿದೆ.
ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸುವುದರ ಮೂಲಕ ನೈತಿಕ ಸಮಾನತೆ ಬೆಳಸಲಾಗಿದೆ.
ಮಕ್ಕಳಿಗೆ ಕಲಿಕೆಯಲ್ಲಿಯೇ ಕಾಯಕದ ಮಹತ್ವ ತಿಳಿಸುವುದರ ಮೂಲಕ ಆರ್ಥಿಕ ಸಮಾನತೆ ತರಲಾಗಿದೆ.
ಶಾಲೆಯಲ್ಲಿ ಪ್ರಜಾಪ್ರಭುತ್ವ ಮಾದರಿಯ ಕಾರ್ಯಗಳನ್ನು ಹಾಕಿಕೊಳ್ಳುವುದರ ಮೂಲಕ ಮಕ್ಕಳಿಗೆ ರಾಜಕೀಯ ಸಮಾನತೆಯ ಅರಿವು ಮೂಡಿಸಲಾಗಿದೆ.

**ಉಪಸಂಹಾರ**

ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತ್ವಗಳು ಪ್ರಜಾಪ್ರಭುತ್ವದ ಅಡಿಗಲ್ಲುಗಳು ಕಾಯಕ ಹಾಗೂ ದಾಸೋಹದ ಮೂಲಕ ಆರ್ಥಿಕ ಸಮಾನತೆ ಮೇಲುವರ್ಗ ಹಾಗೂ ಕೆಳವರ್ಗದಲ್ಲಿ ಸಮಾನತೆಯನ್ನು ಸಾಧಿಸಿದ್ದಲ್ಲದೇ ಸ್ತ್ರೀಯರಿಗೂ ಸಮಾನತೆಯನ್ನು ತಂದು ಕೊಟ್ಟರು. ದೇಹವನ್ನು ದೇಗುಲ ಮಾಡಿ ಅಂಗೈಯಲ್ಲಿ ಲಿಂಗವ ಕೊಟ್ಟು ಧಾರ್ಮಿಕ ಸಮಾನತೆಯನ್ನು ತಂದು ಕೊಟ್ಟರು. ಬಸವಣ್ಣನವರ ಸಂಸತ್ತಾದ ಅನುಭವ ಮಂಟಪದಲ್ಲಿ ವಿಚಾರ ಸ್ವಾತಂತ್ರ್ಯಕ್ಕೆ ಅವಕಾಶ ನೀಡಿದರು. ಜಾತಿ, ಲಿಂಗ, ವರ್ಣಬೇಧವಿಲ್ಲದೇ ಸಮಾನತೆಯನ್ನು ಸಾಧಿಸಿದರು ಹೀಗೆ ಆರ್ಥಿಕ, ಸಾಮಾಜಿಕ, ಧಾರ್ಮಿಕ, ರಾಜಕೀಯ ಇನ್ನೂ ಹಲವಾರು ಕ್ಷೇತ್ರಗಳಲ್ಲಿ ಸಮಾನತೆಯನ್ನು ಬಸವಣ್ಣನವರು ರೂಪಿಸಿದರು. ಇವೆಲ್ಲವೂ ಬಸವಣ್ಣನವರ ಸಮಾನತೆಗೆ ಹಾಗೂ ಹೋರಾಟದ ಸಫಲತೆಗೆ ಸಾಕ್ಷಿಯಾಗಿದೆ. ದಾರ್ಶನಿಕನಾದ ಬಸವಣ್ಣನವರ ವಿಚಾರಗಳು ಕರ್ನಾಟಕದಲ್ಲಷ್ಟೇ ಅಲ್ಲ ಇಡೀ ಜಾಗತಿಕ ಮಟ್ಟದಲ್ಲಿ ಮನ್ನಣೆ ಹೊಂದಿವೆ. ಅವರ ಹೊಸ ಹೊಸ ಚಿಂತನೆ ವಿಚಾರಗಳನ್ನು ಹೊಂದಿದ ಈ ಧರ್ಮವು ವಿಶ್ವ ಧರ್ಮವೆನಿಸಿದೆ.

೧. ಬಸವನಾಳ, ಶಿವಲಿಂಗಪ್ಪ. (೧೯೯೦). ಬಸವಣ್ಣನವರ ಷಟ್‌ಸ್ಥಳದ ವಚನಗಳು, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

೨. ಪಾಟೀಲ, ವಸಂತ. (೧೯೯೦). ಬಸವಣ್ಣನವರ ದೃಷ್ಟಿಯಲ್ಲಿ ಸಮಾನತೆ, ಅನುಭಾವ ಪಥ ಶ್ರೀ ಕುಮಾರೇಶ್ವರ ವಿದ್ಯಾಪ್ರಸಾರ ಸಮಿತಿ, ಸ್ವಾದಿಮಠ, ಸವದತ್ತಿ.

೩. ಪೂಜಾರ, ವ್ಹಿ.ಜಿ. (೨೦೧೧). ಬಸವಣ್ಣ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೪. ಮರುಳಸಿದ್ದಯ್ಯ, ಎಚ್. ಎಂ. (೨೦೦೪). ಅರಿವು – ಆಚರಣೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೫. ಶ್ರೀನಿವಾಸಮೂರ್ತಿ, ಎಮ್. ಆರ್. (೨೦೧೩). ವಚನ ಧರ್ಮಸಾರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.


J.P. COLLEGE OF EDUCATION GADAG 582101

PRINCIPAL
J.P. College of Education
GADAG-582101



Scanned with OKEN Scanner